# ಜಪಾನೀ ಕವಿ ಇಸ್ಸಾ ಹೈಕುಗಳು



ಹಿಮ ಸುರಿದ ದಿನ
ಆಡಲು ಆಗಾಗ ಹೊರಗೆ
ಬರುವುದು ನೊಣ

ಜೋರು ಮಳೆಯ ನಡುವೆ
ನಿಂತಿದ್ದಾನೆ
ಕುರುಡನೊಬ್ಬ



ಕರುಣಾಳು ಗಾಳಿ
ಗುಡಿಸುತಿದೆ ನನ್ನ
ಕೊಳಕು ಗುಡಿಸಲನ್ನು

ಶಿಶಿರದ ಗಾಳಿಯಲ್ಲಿ
ಬುದ್ಧನಲ್ಲಿ ನಂಬಿಕೆಯಿಟ್ಟ
ಚಿಕ್ಕ ಚಿಟ್ಟೆ

ದೊಡ್ಡ ನದಿಗೆ
ಹೇನುಗಳ ಚೆಲ್ಲುತ್ತಿರುವ
ಚೆಲುವೆ



ನನ್ನ ಗಲ್ಲದ ಮೇಲಿರುವ
ಅಕ್ಕಿಗಾಗಿ ಚಿಲಿಪಿಲಿಯೆನುವ
ಮರಿಗುಬ್ಬಚ್ಚಿ

● **ಕನ್ನಡಕ್ಕೆ : ಡಾವೆಂಕಿ**

ಕಲೆ: ವೆಂಕಟ್ರಮಣ ಭಟ್